


## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಏಳುವಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ.
- ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

# ಬೆಳಕಿನ ಸಂಚಲನ

ಸಂ 3, ಸಂ 2 ಜೂನ್ 2015

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಅವರ 22 ಏಪ್ರಿಲ್ 2012ರ ಭಾಷಣದ ಆಯ್ದ ಭಾಗಗಳು)

**ಅನು: ಶ್ರೀದೇವಿ**

ನಾನು ಓರ್ವ ಮಹಿಳೆಯನ್ನು ಭೇಟಿ ಮಾಡಿದೆ. ಅವರು ಒಬ್ಬ ಹೀಲರ್ ಎನ್ನುವುದು ನನಗೆ ತಿಳಿದಿರಲಿಲ್ಲ. ಅವರು ಲಂಡನ್‌ಗೆ ಹಿಂದಿರುಗಿದ ಮೇಲೆ ನನಗೆ ಒಂದು ಇಮೇಲ್ ಬರೆದರು. ಅವರು ಇಲ್ಲಿಗೆ ಬಂದಾಗ ವಿಶೇಷವಾದ ಚೈತನ್ಯಗಳನ್ನು ಕಂಡರೆಂದು ಬರೆದಿದ್ದರು. ಅವರು ಈ ಚೈತನ್ಯಗಳನ್ನು ತಮ್ಮೊಳಗೆ ತೆಗೆದುಕೊಂಡರು. 'ನನಗೆ ಇನ್ನೇನೂ ಬೇಕೆನಿಸುವುದಿಲ್ಲ. ಎಲ್ಲವೂ ನನಗೆ ದೊರೆತಿದೆ. ಇಷ್ಟು ಸಾಕು. ಇನ್ನು ಮುಂದೆ ನಾನು ಪ್ರೀತಿ ಮತ್ತು ಬೆಳಕಿನ ಆಧಾರದ ಮೇಲೆ ಜೀವಿಸುತ್ತೇನೆ' ಎಂದು ಬರೆದಿದ್ದರು.

ಅವರು ಹೀಲಿಂಗ್ ಮಾಡಲು ಪ್ರಾರಂಭಿಸಿದರು. ಒಂದು ದಿನ ಹೀಲಿಂಗ್ ಮಾಡುವಾಗ, 'ನಾನು ಏಕೆ ಈ ಬೆಳಕನ್ನು ಉಪಯೋಗಿಸಬಾರದು?' ಎಂದು ಯೋಚಿಸಿದರು. ಹೀಲಿಂಗ್ ಚೈತನ್ಯಗಳೊಂದಿಗೆ ಬೆಳಕನ್ನು ಜನರಿಗೆ ಕಳುಹಿಸಿದರು. ಹತ್ತು ಪಟ್ಟು ಬೇಗ ಹೀಲಿಂಗ್ ಆಯಿತು ಹಾಗೂ ಈ ರೀತಿಯಾಗಿ ಬೆಳಕನ್ನು ಸ್ವೀಕರಿಸಿದ ಜನರು ಬಹಳ ಶಾಂತತೆಯನ್ನು ಅನುಭವಿಸಿದರು ಎಂದು ಬರೆದಿದ್ದರು.

ಬೆಳಕಿನಂತಹ ಉನ್ನತವಾದ ಚೈತನ್ಯಗಳಿಂದ ಹೀಲ್ ಮಾಡಿದಾಗ, ಅವರು ಗುಣಮುಖರಾಗುವುದೇ ಅಲ್ಲದೆ ಕೆಲವು ಜ್ಞಾನವನ್ನೂ ಅವರಿಗೆ ನೀಡಲಾಗುವುದು. ಅದನ್ನು ಅವರು ಆಳವಾದ ಮಟ್ಟದಲ್ಲಿ ಪಡೆಯುವರು. ಈ ಬೆಳಕು ಹೀಲ್ ಮಾಡುವುದು ಮಾತ್ರವಲ್ಲದೇ ಪರಿವರ್ತನೆಯಾಗಲೂ ಕೂಡ ಸಹಾಯ ಮಾಡುತ್ತದೆ. ಆದ ಕಾರಣ ಬೆಳಕು ಇಡೀ ಸೃಷ್ಟಿಯಲ್ಲಿ ಸಿಗುವ ಒಂದು ಶ್ರೇಷ್ಠವಾದ ಚೈತನ್ಯವಾಗಿದೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ತುಂಬಾ ನಾಚಿಕೆ ಸ್ವಭಾವ ಮತ್ತು ಹೆಚ್ಚು ಆತ್ಮವಿಶ್ವಾಸವಿಲ್ಲದ ಒಬ್ಬ ಹುಡುಗಿ ಲೈಟ್ ಚಾನಲಿಂಗ್ ಸಹಾಯದಿಂದ ಪರಿವರ್ತನೆಯಾಗುತ್ತಿರುವುದನ್ನು ಒಂದು ಕಾಲೇಜಿನ ಪ್ರಾಂಶುಪಾಲರು ಹೇಳಿದರು. ಲೈಟ್ ಚಾನಲಿಂಗ್ ಸೆಷನ್ ಮುಗಿದನಂತರ ಆ ಹುಡುಗಿ ಧೈರ್ಯದಿಂದ ಅಸೆಂಬ್ಲಿಯ ಮುಂದೆ ಮಾತನಾಡಲು ಬಂದಾಗ ಅವರಿಗೆ ಆಶ್ಚರ್ಯವಾಯಿತು. ಅವಳು ಬಹಳ ಆತ್ಮವಿಶ್ವಾಸದಿಂದ, ಹೃತ್ಪೂರ್ವಕವಾಗಿ ಮಾತನಾಡಿದಳು.

ಬೆಳಕಿನಿಂದ ಸಹಾಯ ಕೇಳಿದಾಗ ಈ ರೀತಿ ಆಗುತ್ತದೆ. ಜೀವನದಲ್ಲಿ ಬರುವ ಸವಾಲುಗಳನ್ನು ನಿಭಾಯಿಸಲು, ಆಂತರಿಕ ಬಲವನ್ನು ಅದು ಹೇಗೋ ನೀಡುತ್ತದೆ. ಲೈಟ್ ಚಾನಲಿಂಗ್ ಸೆಷನ್‌ಗಳಲ್ಲಿ ಕೆಳತಂದ ಬೆಳಕು, ಒಂದು ತರಹದ ಭರವಸೆಯ ವಾತಾವರಣವನ್ನು ಉಂಟುಮಾಡಿ, ಮಕ್ಕಳು ತಮ್ಮ ಭಾವನೆಗಳನ್ನು ವ್ಯಕಪಡಿಸಲು ಸುಲಭವಾಗುತ್ತದೆ.

ಬೆಳಕಿನಲ್ಲಿ ನಾವು ಎಲ್ಲಾ ಪರಿಹಾರಗಳನ್ನು ಕಾಣುತ್ತೇವೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ಶಾಲೆಗಳಲ್ಲಿ ಲೈಟ್ ಚಾನಲಿಂಗ್ ಸೆಷನ್‌ಗಳನ್ನು ನಡೆಸುವುದು ನಮ್ಮೆಲ್ಲರಿಗೂ ಒಂದು ವಿಸ್ಮಯಭರಿತವಾದ ಅನುಭವ. ಮಕ್ಕಳು ಅದ್ಭುತವಾದ ಆತ್ಮಗಳು. ಅವರು ಯಾವಾಗಲೂ ಉತ್ಸಾಹಭರಿತರಾಗಿರುತ್ತಾರೆ ಮತ್ತು ಹೊಸ ವಾಸ್ತವಗಳನ್ನು ಅನುಭವಿಸಲು ಉತ್ಸುಕರಾಗಿರುತ್ತಾರೆ. ಅವರ ಮುಗ್ಧತೆ ಮತ್ತು ಪರಿಶುದ್ಧತೆ, ಬೆಳಕಿನಲ್ಲಿರುವ ಆನಂದವನ್ನು ಕ್ಷಣಮಾತ್ರದಲ್ಲಿಯೇ ಅನುಭವಿಸಲು ಅವರಿಗೆ ಸಹಾಯ ಮಾಡುತ್ತವೆ. ಲೈಟ್ ಚಾನಲ್‌ಗಳ ವಿಶ್ವ ಸಂಚಲನದಲ್ಲಿ ಅವರ ಕೊಡುಗೆ ಅಪಾರ.

ಬೇಸಿಗೆ ರಜೆ ಕಳೆದು ಶಾಲೆಗಳು ಮತ್ತೆ ತೆರೆದಿವೆ. ನಮ್ಮ ಕಾರ್ಯಕರ್ತರು ಲೈಟ್ ಚಾನಲಿಂಗ್‌ಗಾಗಿ ಶಾಲೆಗಳಿಗೆ ಭೇಟಿ ನೀಡಲು ಮತ್ತೆ ಸಜ್ಜುಗೊಳ್ಳುತ್ತಿದ್ದಾರೆ. ನಮ್ಮ ಕಾರ್ಯಕರ್ತರು ಪ್ರತಿ ಲೈಟ್ ಚಾನಲಿಂಗ್ ಸೆಷನ್ ಆದ ನಂತರ ಅಸಾಧಾರಣವಾದ ಹರುಷ ಮತ್ತು ತೃಪ್ತಿಯನ್ನು ಅನುಭವಿಸುತ್ತಾರೆ ಹಾಗೂ ದಿನವಿಡೀ ಉಲ್ಲಾಸ ಮತ್ತು ಚೈತನ್ಯಭರಿತರಾಗಿಯೇ ಉಳಿಯುತ್ತಾರೆ. ಈ ನಿಸ್ವಾರ್ಥ ಕಾರ್ಯದಲ್ಲಿ ತಮ್ಮದೇ ಆದ ರೀತಿಯಲ್ಲಿ ನೆರವಾಗಲು ದೊರೆತ ಈ ಅವಕಾಶಕ್ಕಾಗಿ ಅವರು ಸದ್ದಿಲ್ಲದೆ ಬೆಳಕನ್ನು ವಂದಿಸುತ್ತಾರೆ.

ಇಡೀ ಭೂಮಿಯು ಹೊಸಯುಗವನ್ನು ಪ್ರವೇಶಿಸುವ ತನಕ ಈ ಮಹತ್ವಪೂರ್ಣವಾದ ಕೆಲಸ ಇದೇ ತೆರನಾದ ಪ್ರೀತಿ ಮತ್ತು ತೀವ್ರಾಸಕ್ತಿಯಿಂದ ಮುಂದುವರೆಯಲಿ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು–560077 ಭಾರತ.
ಫೋನ್ : (080) 2846 5280, 99000 75280 (10 AM to 5 PM)
ಇ–ಮೇಲ್ : info@lightchannels.com ವೆಬ್‌ಸೈಟ್ : www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಿಲ್ಲ.

**ಬೆಂಗಳೂರು**

ಸೋಮವಾರದಿಂದ ಶುಕ್ರವಾರದವರೆಗೆ
(ಸಂಜೆ 7:00 - 7:15)
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ,
ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

ಸೋಮವಾರ (ಸಂಜೆ 6:30 - 7:00)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಬುಧವಾರ (ಸಂಜೆ 6:30 - 7:00)
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಗುರುವಾರ (ಸಂಜೆ 6:30 - 7:00)
ಮಂಚ್‌ಕಿನ್ಸ್, ನಂ.
890, 38ನೇ ಅಡ್ಡರಸ್ತೆ,
20ನೇ ಮುಖ್ಯರಸ್ತೆ,
4ನೇ 'T' ಬ್ಲಾಕ್, ಜಯನಗರ
☎ 9902025444 ಕಾರ್ತಿಕ್ ಎನ್.

ಶುಕ್ರವಾರ (ಸಂಜೆ 6:30 - 7:00)
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ,
ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ. ಭೋಸೆಕರ್

ಶನಿವಾರ (ಸಂಜೆ 6:30 - 7:00)
ಬಲಮುರಿ ಮಹಾಗಣಪತಿ,
8ನೇ ಅಡ್ಡರಸ್ತೆ,
ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸೆಟಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಶನಿವಾರ (ಸಂಜೆ 6:00 - 7:00)
ಶಿಕ್ಷಾ ಸಾಗರ್ ಪ್ರೈಮರಿ ಶಾಲೆ, ನಂ. 77,
5ನೇ ಮುಖ್ಯ ರಸ್ತೆ, ಪೋಸ್ಟಲ್ ಕಾಲೋನಿ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್



ಬೆಂಗಳೂರಿನ ಕೇಂದ್ರೀಯ ವಿದ್ಯಾಲಯದಲ್ಲಿ ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಬಂದಂತ ಸ್ಕೌಟ್‌ಗಳು ಬೆಳಕನ್ನು ಚಾನಲ್ ಮಾಡುತ್ತಿರುವುದು

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ನಾವು ಬೆಳಕನ್ನು ಚಾನಲ್ ಮಾಡಿದಾಗ ಮತ್ತು ಹರಡಿದಾಗ, ಬೆಳಕು ಹೀಲ್ ಮಾಡುವುದು ಮಾತ್ರವಲ್ಲದೆ, ಅದು ತಿದ್ದುತ್ತದೆ ಹಾಗೂ ಶುಚಿಗೊಳಿಸುತ್ತದೆ. ಅದು ವ್ಯಕ್ತಿಗಳನ್ನು ಮಾತ್ರವಲ್ಲದೆ ವ್ಯವಸ್ಥೆಗಳನ್ನೂ ಸಹ ಶುಚಿಗೊಳಿಸುತ್ತದೆ.
- ಜೀವನದ ಸಣ್ಣ ಪುಟ್ಟ ವಿಷಯಗಳ ಬಗ್ಗೆ ಚಿಂತೆ ಮಾಡುತ್ತಾ ನಮ್ಮ ಎಲ್ಲಾ ಸಮಯವನ್ನು ಕಳೆಯುತ್ತೇವೆ. ನಂತರ, ಒಂದು ದಿನ, ವರ್ಷಗಳು ಜಾರಿಹೋದ ಮೇಲೆ, ಆಕಾಶ, ಚಂದ್ರ, ಇವುಗಳಲ್ಲಿರುವ ಸೌಂದರ್ಯ ಹಾಗೂ ದಿವ್ಯತೆಯನ್ನು ಅನುಭವಿಸದೆಯೇ ಕಣ್ಣುಮುಚ್ಚುತ್ತೇವೆ. ನಮ್ಮ ಜೀವನ ಜಾರಿಹೋಗದಂತೆ ನೋಡಿಕೊಳ್ಳೋಣ. ಉನ್ನತವಾದ ಜೀವನವನ್ನು ಸಾಗಿಸೋಣ.
- ಪ್ರತಿಯೊಂದು ಜೀವಿಯ ಜೀವನ ಪವಿತ್ರವಾದದ್ದು. ಅದು ದೇವರಿಂದ ಬರುತ್ತದೆ. ಇದೊಂದು ಆಧ್ಯಾತ್ಮಿಕ ಸತ್ಯ.
- ನಾವು ಈ ವಿಶ್ವದ ಒಂದು ಭಾಗ; ನಮ್ಮ ಭಾವನೆಗಳು ಮತ್ತು ಆಲೋಚನೆಗಳು ಈ ವಿಶ್ವದ ಮೇಲೆ ಪರಿಣಾಮ ಬೀರುತ್ತವೆ ಹಾಗೂ ನಮ್ಮ ವೈಯಕ್ತಿಕ ಜೀವನದಿಂದಾಚೆಗೆ ನಮಗೆ ಜವಾಬ್ದಾರಿಗಳಿವೆ ಎನ್ನುವ ಅರಿವಿನಿಂದ ಬದುಕುವುದೇ ವಿಶ್ವಾತ್ಮಕ ತತ್ವ.
- ನಾವು ಸೋತರೆ ದೇವರಲ್ಲಿ ಭರವಸೆ ಮತ್ತು ನಂಬಿಕೆಯನ್ನು ಕಳೆದುಕೊಳ್ಳಬಾರದು. ನಾವು ಪುನಸ್ಸಂಘಟಿಸಿಕೊಂಡು ಮುಂದುವರೆಯಬೇಕು.
- ದ್ವೇಷ, ಸ್ವಾರ್ಥ, ದುರಾಸೆ ಇತ್ಯಾದಿಗಳ ಅಡ್ಡಗೋಡೆಗಳನ್ನು ಪ್ರೀತಿಯಿಂದ, ಅಧ್ಯಾತ್ಮೀಕರಣಗೊಳ್ಳುವುದರಿಂದ ಹಾಗೂ ಧ್ಯಾನದಿಂದ ಮಾತ್ರ ಉರುಳಿಸಬಹುದು.
- ಭರವಸೆಯೇ ಜೀವನದ ಆಸರೆ.

–ಗುರೂಜಿ ಕೃಷ್ಣಾನಂದ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 4920 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 27.07 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ಬೆಳಕಿನ ಜೊತೆಯಲ್ಲಿರಿ

**ಕಾರ್ತಿಕ್ ಎನ್; ಅನು: ಶ್ರೀದೇವಿ**

ಒಂದು ಸಲ, ಯುವತಿಯೊಬ್ಬಳು ತನ್ನ ಜೀವನ ಎಷ್ಟೊಂದು ಒತ್ತಡದಿಂದ ತುಂಬಿಹೋಗಿದೆ ಎನ್ನುವುದನ್ನು ನನ್ನೊಡನೆ ಹಂಚಿಕೊಳ್ಳುತ್ತಿದ್ದಳು. ಆಕೆಗೆ ಆಗ ತಾನೆ ಕೆಲಸ ಸಿಕ್ಕಿತ್ತು, ಕಚೇರಿಯಲ್ಲಿನ ಅತಿಯಾದ ನಿರೀಕ್ಷೆ ಮತ್ತು ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸಲು ಕಷ್ಟಪಡುತ್ತಿದ್ದಳು. ಆ ಒತ್ತಡ ಅವಳ ಮನಸ್ಥಿತಿಯ ಮೇಲೆ ಪರಿಣಾಮ ಬೀರಿತ್ತು ಹಾಗೂ ತಂದೆ ತಾಯಿಯರ ಜೊತೆ ಮತ್ತು ಕೆಲವು ಸಲ ಸ್ನೇಹಿತರೊಡನೆ ಕೂಡ ಘರ್ಷಣೆಯಾಗುತ್ತಿತ್ತು! ಸಂಬಂಧಗಳು ಮತ್ತು ಪರಿಸ್ಥಿತಿಗಳು ಮನೆಯಲ್ಲಿ ಮತ್ತು ಬೇರೆ ಕಡೆಗಳಲ್ಲಿ ನಿಭಾಯಿಸಲು ಸಾಧ್ಯವಾಗದ ಮಟ್ಟಕ್ಕೆ ನಿಧಾನವಾಗಿ ಬೆಳೆದು ಸಂಕಷ್ಟದ ಸ್ಥಿತಿಯನ್ನು ತಲುಪುತ್ತಿದ್ದವು. ಆಕೆ ಆಗಾಗ್ಗೆ ಅಸಹಾಯಕತೆಯನ್ನು ಅನುಭವಿಸುತ್ತಿದ್ದಳು ಮತ್ತು ನಿರಾಸೆಗೊಳ್ಳುತ್ತಿದ್ದಳು. ಆಕೆ ಕ್ಷೋಭೆಗೊಂಡಿದ್ದಳು.

ಹೆಚ್ಚು ವಿವರಿಸದೆ, ನಾನು ಆಕೆಗೆ ಲೈಟ್ ಚಾನಲಿಂಗ್ ಮಾಡುವಂತೆ ಸಲಹೆ ನೀಡಿದೆ. ಅನೇಕರು ಇದರಿಂದ ಪ್ರಯೋಜನ ಪಡೆದಿದ್ದಾರೆ ಎಂದು ಹೇಳಿದೆ. ಕೆಲವು ವಾರಗಳ ಅಭ್ಯಾಸದ ನಂತರ, ಆಶ್ಚರ್ಯಕರವೆನ್ನುವಂತೆ ಪರಿಸ್ಥಿತಿಗಳು ಉತ್ತಮಗೊಳ್ಳುತ್ತಾ ಸ್ವಲ್ಪ ಸ್ವಲ್ಪವಾಗಿ ಸಮತೋಲನದ ಕಡೆಗೆ ಬರುತ್ತಿರುವುದನ್ನು ಆಕೆ ಕಂಡಳು. ಪರಿಸ್ಥಿತಿಗಳನ್ನು ನಿಭಾಯಿಸುವಲ್ಲಿ ಆಶ್ಚರ್ಯಕರ ಬಲ ಬಂದಿರುವುದನ್ನೂ ಕಂಡಳು. ಸಂಬಂಧಗಳು ಉತ್ತಮಗೊಂಡವು, ಒಳಗಿನ ಕ್ಷೋಭೆಗಳು ಕಡಿಮೆಯಾಗತೊಡಗಿದವು; ಸ್ವಲ್ಪ ಶಾಂತಿ ಲಭಿಸಿತು! ಆಕೆ ಅಭ್ಯಾಸವನ್ನು ಇನ್ನೂ ಕೆಲವು ದಿನ ಮುಂದುವರೆಸಿದಳು. ಆಕೆಯ ಜೀವನ ನಿಭಾಯಿಸಬಹುದಾದ ಸ್ಥಿತಿಗೆ ಬರುತ್ತಿರುವುದನ್ನು ಕಂಡಳು. ಸಂತೋಷ ಮತ್ತು ತೃಪ್ತಿಹೊಂದಿ, ಲೈಟ್ ಚಾನಲಿಂಗ್ ಮಾಡುವುದನ್ನು ನಿಲ್ಲಿಸಿದಳು!

ಸಹಜವಾಗಿಯೇ, ಕೆಟ್ಟದ್ದೇನೂ ಆಗಲಿಲ್ಲ! ಬೆಳಕು ನಮಗೆ ಕೆಟ್ಟದ್ದನ್ನು ತರುವುದೇ ಇಲ್ಲ ಎನ್ನುವುದು ನಮ್ಮ ನೇರ ಅನುಭವದಿಂದ ನಮಗೆ ತಿಳಿದಿದೆ. ಆ ಕೆಲವು ವಾರಗಳ ಅಭ್ಯಾಸದಿಂದ ಬಂದ ಸ್ವಲ್ಪ ಶಾಂತಿಯನ್ನು ಆ ಹುಡುಗಿ ಉಳಿಸಿಕೊಂಡಳು. ಇನ್ನೂ ಕೆಲವು ವಾರಗಳು ಕಳೆದಂತೆ ಆಕೆಯ ಜೀವನ ನಿಧಾನವಾಗಿ ಮೊದಲಿನ ಸ್ಥಿತಿಗೆ ಮರಳಿತು.

ಕೆಲವು ವಾರಗಳ ಲೈಟ್ ಚಾನಲಿಂಗ್ ಅಭ್ಯಾಸ ಅಂತಹ ಹಿತವಾದ ಬದಲಾವಣೆಗಳನ್ನು ತಂದಿತೆಂದರೆ, ಆಕೆ ಇನ್ನೂ ಹೆಚ್ಚಿನ ಕಾಲ ಅಭ್ಯಾಸಮಾಡಿದ್ದರೆ ಒಳ್ಳೆಯದಿತ್ತಲ್ಲವೆ? ನಿಯತವಾದ ಅಭ್ಯಾಸ ಅಷ್ಟು ಕಷ್ಟವೇ?! ಎಂದು ನಾನು ಆಲೋಚಿಸಿದೆ.

ಬಹಳ ಸಮಯದಿಂದ ಲೈಟ್ ಚಾನಲಿಂಗ್ ಮಾಡುತ್ತಿರುವ, ಹಾಗೂ ಹೆಚ್ಚು ಕಾಲ ಅಭ್ಯಾಸ ಮಾಡಿರುವವರನ್ನು ಗಮನಿಸುತ್ತಿರುವ ನಾನು ನಿಯತವಾಗಿ ಅಭ್ಯಾಸ ಮಾಡುವುದು ನಮ್ಮಲ್ಲಿ ಕೆಲವರಿಗೆ ಕಷ್ಟವಾಗಿರುವುದನ್ನು ಕಾಣುತ್ತೇನೆ. ಆರಂಭಿಕ ಪ್ರಯೋಜನಗಳನ್ನು ಪಡೆದ ಬಳಿಕ ದಿನೇದಿನೇ ಅಥವಾ ವಾರದಿಂದ ವಾರಕ್ಕೆ ಯಾವುದೇ ರೀತಿಯ ಮಹತ್ವಪೂರ್ಣವಾದ ಬದಲಾವಣೆಗಳಾಗಲಿ ಅಥವಾ ಪವಾಡಗಳನ್ನಾಗಲಿ ನಮ್ಮ ಜೀವನದಲ್ಲಿ ನಾವು ಕಾಣದಿರುವ ಹಂತ ಬರುತ್ತದೆ. ಬಹುಷಃ ಆ ಕೆಲವು ನಿಮಿಷಗಳ ಶಾಂತಿ ಮತ್ತು ಸಮಾಧಾನ ಮಾತ್ರ ನಮ್ಮಲ್ಲಿ ಉಳಿಯುತ್ತದೆ, ಹಾಗೂ ಈ ಅಭ್ಯಾಸ ಆರಂಭಿಕ ದಿನಗಳಲ್ಲಿ ಪರಿಣಾಮಕಾರಿಯಾಗಿದ್ದಂತೆ ಈಗಲೂ ಇದೆಯೇ ಎನ್ನುವ ಅನುಮಾನ ಮೂಡುತ್ತದೆ.

ನಾನು ಅರ್ಥಮಾಡಿಕೊಂಡಂತೆ, ಬೆಳಕು ಈಗಾಗಲೆ ನಮ್ಮನ್ನು ಸಕಾರಾತ್ಮಕ ಹಾಗೂ ಪ್ರಗತಿಪರ ಹಾದಿಯಲ್ಲಿ ಇಟ್ಟಿರುವುದರಿಂದ ಅಂತಹ ಮಹತ್ವಪೂರ್ಣವಾದ ಬದಲಾವಣೆ ಮತ್ತು ಪವಾಡಗಳ ಅವಶ್ಯಕತೆ ಪದೇ ಪದೇ ನಮಗೆ ಇರುವುದಿಲ್ಲ ಎನ್ನುವುದೇ ಬಹುಶಃ ಇದಕ್ಕೆ ಕಾರಣವಿರಬಹುದು! ನಾವು ನಿರಂತರವಾಗಿ ಉತ್ತಮಗೊಳ್ಳುತ್ತಿರುತ್ತೇವೆ ಮತ್ತು ಪರಿವರ್ತನೆಗೊಳ್ಳುತ್ತಿರುತ್ತೇವೆ. ಆಳವಾಗಿ ನಮ್ಮೊಳಗೆ ನೋಡಿದಾಗ ನಮ್ಮ ಜೀವನದಲ್ಲಾಗಿರುವ ಗುಣಾತ್ಮಕ ಬದಲಾವಣೆಯನ್ನು ನಾವು ಗಮನಿಸಬಹುದು. ಹಿನ್ನೆಲೆಯಲ್ಲಿ ಬೆಳಕು ಕೆಲಸ ಮಾಡಲು ಪ್ರಾರಂಭಿಸುವುದನ್ನೂ ಮತ್ತು ನಮ್ಮ ಜೀವನದ ಎಲ್ಲಾ ಅಂಶಗಳನ್ನು ನಿಧಾನವಾಗಿ ಉತ್ತಮಗೊಳಿಸುವುದನ್ನೂ ಗಮನಿಸಬಹುದು. ಹಾಗೂ, ಹೆಚ್ಚು ಸದ್ದಿಲ್ಲದೆ ಮತ್ತು ಬಹಿರಂಗಪಡಿಸದೆ ಮಹತ್ವಪೂರ್ಣವಾದ ಬದಲಾವಣೆ ಮತ್ತು ಪವಾಡಗಳು ಆಗುತ್ತಿರುತ್ತವೆ!

ನಮ್ಮ ತಕ್ಷಣದ ಸಮಸ್ಯೆಗಳು ಬಗೆಹರಿದ ನಂತರ ಹಾಗೂ ಲೈಟ್ ಚಾನಲಿಂಗ್‌ನಿಂದ ಕೆಲವೊಂದು ರೀತಿಯ ಸಹಾಯ ಪಡೆದ ನಂತರ, ನಾವು ಅದರ ಅಭ್ಯಾಸವನ್ನು ನಿಲ್ಲಿಸುವ ಕಡೆಗೆ ಒಲುತ್ತೇವೆ. ಆದರೆ, ಬೆಳಕು ನಮ್ಮ ಜೊತೆಯಿರುವಂತೆ, ನಮ್ಮೊಳಗಿರುವಂತೆ ಅವಕಾಶ ಕಲ್ಪಿಸಲು ಸ್ವಲ್ಪ ಹೆಚ್ಚಿನ ಪ್ರಯತ್ನಗಳನ್ನು ಮಾಡೋಣ. ನಿಯತವಾಗಿ, ಸಾಧ್ಯವಾದರೆ ಹೆಚ್ಚಿನ ಕಾಲ, ಅಭ್ಯಾಸ ಮಾಡಲು ಪ್ರಯತ್ನಿಸೋಣ.

ಆ ಯುವತಿ ಎದುರಿಸಿದ ಒತ್ತಡ, ನಿಸ್ಸಹಾಯಕತೆ ಹಾಗೂ ನಿರಾಸೆಗಳು, ಈಗಿನ ದಿನಗಳಲ್ಲಿ ನಮ್ಮಲ್ಲಿ ಅನೇಕರು ಏನನ್ನು ಎದುರಿಸುತ್ತಿದ್ದೇವೆಯೋ ಅವುಗಳನ್ನು ಹೋಲುತ್ತವೆ. ಬೆಳಕಿನಿಂದ ನಮಗೆ ಸಿಗುವ ಸಹಾಯದೊಂದಿಗೆ ನಾವು, ಅಂತಹ ನಿರಾಸೆ ಹಾಗೂ ಸಂಘರ್ಷಗಳನ್ನು ಮೀರಿ ಮೇಲೇರಬಹುದು. ಬೆಳಕಿನ ಜೊತೆಗೆ ನಾವು ಇರುವುದೇ ಆದರೆ... ಬೆಳಕಿಗೆ ನಾವು ಅವಕಾಶ ನೀಡಿದ್ದೇ ಆದರೆ... ಜೀವನದ ಸೌಂದರ್ಯ ಮತ್ತು ಭವ್ಯತೆಯನ್ನು ಅನುಭವಿಸಲು ಬೆಳಕು ಕಲಿಸುತ್ತದೆ ಹಾಗೂ ಸಹಾಯ ಮಾಡುತ್ತದೆ! ■

## ಲೈಟ್ ಚಾನಲಿಂಗ್ ಕೇಂದ್ರಗಳು

ಶನಿವಾರ (ಸಂಜೆ 7:30 - 8:30)
ಗುರುದ್ವಾರ ಸಾಹಿಬ್,
ಆಂಜನೇಯ ದೇವಸ್ಥಾನದ ಎದುರು,
ಅಶ್ವತ್ಥ ನಗರ ಮುಖ್ಯ ರಸ್ತೆ, ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್

### ಸೋಲಾಪೂರ್

ಪ್ರತಿದಿನ (ಸಂಜೆ 7:00 - 7:30)
ಬಾಲಗಣೇಶ್ ಮಂದಿರ, ಬುಶರ್ ಪೇಠ್,
ಮೊಹೋಲ್
☎ 09860967066, ಶ್ರೀ ವಿವೇಕಾನಂದ ಸ್ವಾಮಿ
☎ 09970800279, ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ

ಭಾನುವಾರ (ಬೆಳಿಗ್ಗೆ 10:00 -10:30)
ನಂ. 481, ಸಾಯಿಪ್ರೇಮ್, 19 ನೇ ರಸ್ತೆ,
4ನೇ ಸೆಕ್ಟರ್, ಕೆ.ಕೆ. ನಗರ
☎ 9444880409, ಶ್ರೀಮತಿ ರಾಜಲಕ್ಷ್ಮಿ ಆರ್.

### ಪುಣೆ

ಶನಿವಾರ (ಸಂಜೆ 6:30 - 7:00)
3 B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ, ಪುಣೆ - 411016
☎ 9011038169, ಶ್ರೀ ಆಶುತೋಶ್ ನವನ್‌ಗುಲ್


ಗುರುವಾರ (ಮಧ್ಯಾಹ್ನ 2:30 - 3:00)
ಸಿಂಧಿ ಮಂದಿರ, ಸತ್ನಮ್ ಟೆಕ್ಸ್‌ಟೈಲ್ ಪಕ್ಕ,
ಶಿವಸೇನ ಕಛೇರಿಯ ಸಮೀಪ, ಉರುಲಿ ಕಾಂಚನ್,
ಹವೇಲಿ ಜಿಲ್ಲೆ, ಪುಣೆ - 412202
☎ 9822973632, ಶ್ರೀ ಗೋರಕ್ಷ್ ಮಹಾದಿಕ್

### ವಿಶಾಖಪಟ್ಟಣ

ಶನಿವಾರ (ಸಂಜೆ 7:00 - 7:30)
ಮನೆ ನಂ. 14-339/19, ಫ್ಲಾಟ್ ನಂ. 207,
ಶ್ರೀ ಮಿತ್ರ ಹೈಟ್ಸ್, ಬಾಲಾಜಿ ಗಾರ್ಡನ್,
ಗೋಪಾಲಪಟ್ನಂ, APRTC ಬಸ್ ಡಿಪೋ ಎದುರು
☎ 9848628324, ಶ್ರೀ ವಿ. ಹರಿಕೃಷ್ಣನ್

### ಮೀರಜ್

ಗುರುವಾರ (ಸಂಜೆ 7:45)
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-gat Plot No-135, ಸುಭಾಷ್ ನಗರ ಪೋಸ್ಟ್
☎ 9822421463, ಶ್ರೀ ಮಹಾಜನ್



## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ನಾನು ಮನೆ ಕೆಲಸದವಳು. ಕಳೆದ ಎರಡು ವರ್ಷಗಳಿಂದ ಪ್ರತಿದಿನ ನಾನು ಬೆಳಕನ್ನು ಚಾನಲ್ ಮಾಡುತ್ತಿದ್ದೇನೆ. ನನ್ನ ಅತ್ತೆಯವರು ತೀರಿಕೊಂಡ ನಂತರ ಹಳ್ಳಿಯೊಂದರಲ್ಲಿ ಒಬ್ಬರೇ ಜೀವನ ನಡೆಸುತ್ತಿದ್ದ ಅಂಗವಿಕಲೆಯಾದ ನನ್ನ ನಾದಿನಿಯ ಬಗ್ಗೆ ನನಗೆ ಚಿಂತೆಯಾಗಿತ್ತು. ಅವಳು ಜೀವನದಲ್ಲಿ ನೆಲೆಯೂರಲಿ ಎಂಬ ಉದ್ದೇಶದಿಂದ ನಾನು ಪ್ರತಿದಿನ ಅವಳಿಗೆ ಬೆಳಕನ್ನು ಕಳುಹಿಸಲು ಪ್ರಾರಂಭಿಸಿದೆ. ಒಂದು ದಿನ ಬೆಳಕನ್ನು ಚಾನಲ್ ಮಾಡಿದ ನಂತರ ಪತ್ರಿಕೆಯೊಂದರಲ್ಲಿ, ಅವಳಿಗಾಗಿ ವಿವಾಹ ಸಂಬಂಧದ ಜಾಹೀರಾತುಗಳನ್ನು ನೋಡಿದೆ. ಇದರಿಂದ ಅವಳ ಮದುವೆ ಸಂಬಂಧ ಕೂಡಿ ಬಂದಿದೆ. ಮದುವೆಯಾಗುವ ಹುಡುಗ ಒಳ್ಳೆಯ ಕೆಲಸದಲ್ಲಿದ್ದಾನೆ ಹಾಗೂ ಅವನಲ್ಲಿ ಯಾವ ಕೆಟ್ಟ ಅಭ್ಯಾಸಗಳಿಲ್ಲ. ಆತ ಬಹಳ ಸಹಾನುಭೂತಿಯುಳ್ಳವನು. ಇಷ್ಟೆಲ್ಲಾ ಆಗಿದ್ದು ಬೆಳಕಿನಿಂದ. ಇದರಿಂದ ನನಗೆ ಬಹಳ ಸಂತೋಷವಾಗಿದೆ.

–ಜಯಂತಿ, ಲೈಟ್ ಚಾನಲ್

ಜನವರಿ ತಿಂಗಳಿನಲ್ಲಿ ವಿಶ್ವ ಚಾನಲ್‌ಗಳ ದಿನದ ಕಾರ್ಯಕ್ರಮಕ್ಕಾಗಿ, ನಾನು ಇರುವ ಸ್ಥಳದಿಂದ ಸುಮಾರು 50 ಕಿ.ಮಿ. ದೂರದ ಅಪರಿಚಿತ ಸ್ಥಳಕ್ಕೆ ಹೋಗಬೇಕಾಗಿತ್ತು. ನಾನು ಶಾಲೆಯನ್ನು ತಲುಪಲು ಇನ್ನೂ 20 ಕಿ.ಮಿ ದೂರವಿರುವಾಗ ರಸ್ತೆ ನಿರ್ಜನವಾಗಿತ್ತು ಮತ್ತು ಸುತ್ತಮುತ್ತ ಯಾರೂ ಇರಲಿಲ್ಲ. ಅದೊಂದು ಅರಣ್ಯ ಪ್ರದೇಶದಂತೆ ಕಾಣತೊಡಗಿತು. ಸರಿಯಾದ ದಾರಿಯಲ್ಲಿ ನಾನು ಹೋಗುತ್ತಿದ್ದೇನೆಯೇ ಇಲ್ಲವೇ ಎಂದು ನನಗೆ ಗೊತ್ತಾಗಲಿಲ್ಲ. ನಾನು ಒಂದು ಸ್ಥಳದಲ್ಲಿ ನಿಂತು ಸ್ವಲ್ಪ ಸಮಯ ಕಾದೆ. ತಕ್ಷಣ ಒಬ್ಬ ವ್ಯಕ್ತಿ ಕಾಣಿಸಿಕೊಂಡು ನನಗೆ ಸಹಾಯ ಮಾಡಲು ಮುಂದಾದರು. ನನಗೆ ಬಹಳ ಸಂತೋಷವಾಯಿತು. ಆ ವ್ಯಕ್ತಿ ಸರಿಯಾದ ದಾರಿ ತೋರಿಸಿದರು ಹಾಗೂ ಯಾವುದೇ ಕಷ್ಟವಿಲ್ಲದೆ ನಾನು ಶಾಲೆಯನ್ನು ತಲುಪಿದೆ. ಶಾಲೆಯ ಅಧಿಕಾರಿಗಳಿಗೆ ತುಂಬಾ ಸಂತೋಷವಾಯಿತು ಹಾಗೂ ನನಗೆ ಬಹಳ ಪ್ರೀತಿ ಮತ್ತು ಗೌರವವನ್ನು ತೋರಿದರು. ಪ್ರಾಂಶುಪಾಲರು ಲೈಟ್ ಚಾನಲಿಂಗ್‌ನಿಂದ ತಮಗಾದ ಅನುಭವವನ್ನು ಹಂಚಿಕೊಂಡರು. ಅವರ ಶಾಲೆಯ ಪರೀಕ್ಷೆಯ ಫಲಿತಾಂಶಗಳು ಉತ್ತಮವಾಗಿದ್ದು ಆ ಬಡಾವಣೆಯಲ್ಲಿ ಶಾಲೆಗೆ ಉತ್ತಮ ರ್‍ಯಾಂಕ್ ಬಂದಿದೆ. ವಿದ್ಯಾರ್ಥಿಗಳು ಶಾಲೆಗೆ ಪ್ರತಿದಿನ ತಪ್ಪದೆ ಬರುತ್ತಾರೆ ಹಾಗೂ ಚೆನ್ನಾಗಿ ನಡೆದುಕೊಳ್ಳುತ್ತಾರೆ. ವಿದ್ಯಾರ್ಥಿಗಳ ಪೋಷಕರಿಗೂ ಸಹ ಬೆಳಕು ಸಹಾಯ ಮಾಡಿದೆ ಎಂದು ಹೇಳಿದರು.

ಇನ್ನೊಂದು ಸಮಯದಲ್ಲಿ, ಕೇಂದ್ರೀಯ ವಿದ್ಯಾಲಯದಲ್ಲಿ ಲೈಟ್ ಚಾನಲಿಂಗ್ ನಡೆಸಿದ ಸಂದರ್ಭದಲ್ಲಿ, ಒಬ್ಬ ವಿದ್ಯಾರ್ಥಿನಿ ತನ್ನ ಅನುಭವವನ್ನು ಹಂಚಿಕೊಂಡಳು. "ಲೈಟ್ ಚಾನಲ್ ಮಾಡುತ್ತಿರುವಾಗ ನನ್ನ ಪ್ರಜ್ಞೆ ಕಳೆದುಕೊಂಡೆ ಆದರೆ ಬೇರೆ ಎಲ್ಲ ವಿದ್ಯಾರ್ಥಿಗಳಲ್ಲಿ ಬೆಳಕು ತುಂಬಿರುವುದನ್ನು ನೋಡಿದೆ" ಎಂದು ಹೇಳಿದಳು.

–ಮೂರ್ತಿ ಕೆ ಇ, ಕಾರ್ಯಕರ್ತ

ಶ್ರೀಮತಿ ಕುಲಕರ್ಣಿಯವರು ಲೈಟ್ ಚಾನಲಿಂಗ್ ಬಗ್ಗೆ ಮಾತನಾಡುವಾಗ, ಅದು ಅಷ್ಟೊಂದು ಪ್ರಭಾವಶಾಲಿಯೇ ಎಂಬ ಅನುಮಾನ ನನ್ನಲ್ಲಿತ್ತು. ಆಗ ನಮ್ಮ ವಿದ್ಯಾರ್ಥಿನಿ ಪ್ರಣೀತ ಕಾರ್ವೆಯು ಅಭಿಪ್ರಾಯಗಳನ್ನು ಕೇಳಿಸಿಕೊಂಡ ಮೇಲೆ ಇದು ಒಂದು ಪವಾಡವೇ ಸರಿ ಎಂದೆನಿಸಿತು! ಪ್ರಣೀತ ಯಾವಾಗಲೂ ಒತ್ತಡದಲ್ಲಿ ಇರುತ್ತಿದ್ದಳು. ಪ್ರಣೀತ ಶಾಂತ ಸ್ವಭಾವದ ಹುಡುಗಿ. ಆಕೆ ಮಾತನಾಡುವುದಕ್ಕಾಗಿ ವೇದಿಕೆಗೆ ಬಂದಾಗ ನನಗೆ ಬಹಳ ಸಂತೋಷವಾಯಿತು. ನಮ್ಮ ಕಾಲೇಜಿನಲ್ಲಿ ಇನ್ನು ಮುಂದೆ ನಾವು ಪ್ರತಿ ದಿನ ಬೆಳಕನ್ನು ಚಾನಲ್ ಮಾಡುತ್ತೇವೆ ಎಂದು ನಾನು ಶ್ರೀಮತಿ ಕುಲಕರ್ಣಿಯವರಿಗೆ ಮಾತು ಕೊಟ್ಟಿದ್ದೇನೆ. ನಮ್ಮಲ್ಲಿರುವ ಕೆಲವು ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ತರಬೇತಿ ಕೊಡುತ್ತೇವೆ. ಇದರಿಂದ ಕಾರ್ಯಕರ್ತರ ಸಹಾಯವಿಲ್ಲದೆ ನಾವೇ ಲೈಟ್ ಚಾನಲಿಂಗ್ ಮಾಡಬಹುದು.

–ಶ್ರೀಮತಿ ಸ್ವಾತಿ ಎನ್ ಸಾಯಂಕರ್, ಪ್ರಿನ್ಸಿಪಾಲ್,
ಬ್ಯಾಚೆಲರ್ ಆಫ್ ಕಂಪ್ಯೂಟರ್ ಅಪ್ಲಿಕೇಶನ್ಸ್
ಕಾಲೇಜ್, ಕ್ಯುಮಿನ್ಸ್ ಕಾಲೇಜ್ ಕ್ಯಾಂಪಸ್, ಪುಣೆ

ಕಳೆದ ಆರು ತಿಂಗಳುಗಳಿಂದ ಕೆಲಸದ ನಿಮಿತ್ತ ನಾನು ಪ್ರವಾಸದಲ್ಲಿ ಇದ್ದ ಕಾರಣ ನನ್ನ ಲೈಟ್ ಚಾನಲಿಂಗ್ ಕೆಲಸ ನಿಂತುಹೋಗಿತ್ತು. ಇದರಿಂದ ನನಗೆ ತುಂಬಾ ಬೇಸರವಾಗಿತ್ತು ಆದರೆ ನನಗೆ ಸಮಯ ಹೊಂದಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಈ ವರ್ಷದ ವಿಶ್ವ ಚಾನಲ್‌ಗಳ ದಿನದಂದು ನಾನು ಕೆಲಸ ಮಾಡುವುದು ಖಾತ್ರಿ ಇರಲಿಲ್ಲ. ಆದರೆ ಜನವರಿ 2ರಂದು ನಾನು ಕೆಲಸ ಕಳೆದುಕೊಂಡೆ. ಆಗ ಮತ್ತೆ ನಾನು ಲೈಟ್ ಚಾನಲಿಂಗ್ ಕೆಲಸ ಮಾಡುವುದಕ್ಕೆ ಪ್ರಾರಂಭಿಸಿದೆ. ಅದು ಒಂದು ಅದ್ಭುತ ಮತ್ತು ಸುಂದರವಾದ ಅನುಭವ. "ನೀವು ನಿಜವಾಗಿ ಕೆಲಸ ಮಾಡಬೇಕೆಂದು ಬಯಸಿದರೆ, ನೀವು ಕೆಲಸ ಮಾಡೇಮಾಡುತ್ತೀರಿ" ಎಂದು ಹೇಳಿದ ಗುರೂಜಿಯವರ ಮಾತು ನೆನಪಾಯಿತು. 'ಕೆಲಸ, ಕೆಲಸ, ಕೆಲಸ' ಎನ್ನುವ ಒಂದೇ ಒಂದು ಕಾರಣಕ್ಕಾಗಿ ನಾವೆಲ್ಲರೂ ಇಲ್ಲಿ ಸೇರಿದ್ದೇವೆ, ಮಾತ್ಯಾವುದಕ್ಕೂ ಅಲ್ಲ ಹಾಗೂ ನಾನು ಇದನ್ನು ಮಾಡಿದರೆ, ಉಳಿದ ಎಲ್ಲವನ್ನೂ ನೋಡಿಕೊಳ್ಳಲಾಗುವುದು ಎನ್ನುವುದು ನನಗೆ ಅರಿವಾಗಿದೆ. ನನ್ನ ಪ್ರತಿಯೊಂದು ಸಮಸ್ಯೆಯೂ ಪರಿಹಾರವಾಗಿದೆ. ಒಂದು ಒಳ್ಳೆಯ ಸಮಾಚಾರವೆಂದರೆ, ಈಗ ನನಗೆ ಹೆಚ್ಚಿನ ವೇತನದ ಉತ್ತಮವಾದ ಕೆಲಸ ಸಿಕ್ಕಿದೆ. ನಾನು ಕೆಲಸ ಮಾಡುತ್ತಿರುವ ಕ್ಷೇತ್ರದಲ್ಲಿ ಇದು ಸುಲಭವಲ್ಲ. ಆದರೆ ಅದು ಮಾಸ್ಟರ್‌ಗಳ ಯೋಜನೆಯಾಗಿತ್ತು ಎಂದು ನನಗೆ ಅನ್ನಿಸುತ್ತದೆ. ನಮ್ಮ ಆಧ್ಯಾತ್ಮಿಕ ಮತ್ತು ಲೌಕಿಕ – ಇವೆರಡರ ಅವಶ್ಯಕತೆಗಳನ್ನು ಮಾಸ್ಟರ್‌ಗಳು ನೋಡಿಕೊಳ್ಳುತ್ತಾರೆ.

–ದಾಮೋದರನ್ ಡಿ, ಕಾರ್ಯಕರ್ತ

ಬೆಳಕಿನ ಸಂಚಲನ ಕನ್ನಡ ಮಾಸಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು– 560077
ಮುದ್ರಣ ಸ್ಥಳ : ಗುಡ್ ಪ್ರಿಂಟ್ಸ್, ವೀಣ ಕಾಂಪ್ಲೆಕ್ಸ್, ಹಳೇ ಮದ್ರಾಸ್ ರಸ್ತೆ, ದೂರವಾಣಿನಗರ, ಬೆಂಗಳೂರು – 560 016
ಮಾಲೀಕರು : ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077 ಸಂಪಾದಕರು: ಶ್ರೀದೇವಿ